rate. So Government have asked: 'why not you call for re-tender'.

Sri J. B. MALLARADHYA.—Is the Government willing to accept that tender if the Chief Engineer again sends it back and wants it to be accepted ?

Sri H. K. VEERANNA GOWDH.—How can I answer questions with IF's and BUT's, Sir ? I am awaiting the reply from the Chief Engineer.

Sri B. V. DESAI.—What is the estimated cost of the work ?

Sri H. K. VEERANNA GOWDH.—4.5 lakhs.

ಶ್ರೀ ಬಿ. ವಿ. ದೇಸಾಯಿ.—ಸರ್ಕಾರದವರು ಈ ಕೆಲಸವನ್ನು ತಾವೇ ಮಾಡುವುದಕ್ಕೆ ಯೋಚನೆ ಮಾಡಬಹುದೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಮಾಡಬಹುದು. ಅದಕ್ಕೆ ಆಕ್ಷೇಪಣೆ ಇಲ್ಲ.

ಶ್ರೀಮತಿ ಕೆಂಪಮ್ಮ.—ಈ ಕೆಲಸಕ್ಕೆ ಎಷ್ಟು ಹಣ ಖರ್ಚಾಗುತ್ತದೆ ?

ಶ್ರೀ ಎಚ್. ಕೆ. ವೀರಣ್ಣಗೌಡ.—4½ ಲಕ್ಷ ರೂಪಾಯಿ ಖರ್ಚಾಗುತ್ತದೆ.

Increment files pending in the Office of the Excise Commissioner.

Q.—2478. Sri N. BASVANT RAYA (Yadgiri).—

Will the Government be pleased to state:—

(*a*) whether it is a fact that numerous files are pending disposal in the office of the Excise Commissioner in regard to increments, leave and efficiency bar, pertaining to Excise Inspectors of Hyderadad Karnatak;

(*b*) if so, the reasons for not disposing the said cases for such a long time ?

A.—Sri MOHAMED ALI (Minister for Excise and Rural Industries).—

(*a*) No file regarding increment or leave is pending. Regarding efficiency bar, two cases are pending.

(*b*) The reasons for the delay in the disposal are that in one case the service register of the official has not been received and in another case the receipt of the appeal file from the Board of Revenue, Andhra Pradesh, is awaited.

ಶ್ರೀ ಎಸ್. ಬಸವಂತರಾಯ.—ಸರ್ವಿಸ್ ರಿಜಿಸ್ಟರು ತಲಪದೆ ಇರುವುದಕ್ಕೆ ಕಾರಣವೇನು ಮತ್ತು ಇದಕ್ಕೆ ಹೊಣೆಗಾರರು ಯಾರು ?

*Sri MOHAMED ALI.—Sir, I have not followed the question.

Mr. SPEAKER.—He wants to know why there is delay and if there is delay, who is responsible for it.

Sri MOHAMED ALI.—In one case, the Service Register has been called for and in the other case, some files and papers from Andhra Pradesh Government have been called for.

ಶ್ರೀ ಎಸ್. ಬಸವಂತರಾಯ.—ಸರ್ವಿಸ್ ರಿಜಿಸ್ಟರು ಬಂದಿಲ್ಲವೆಂದರೆ ಅದಕ್ಕೆ ಹೊಣೆಗಾರರು ಯಾರು ?

ಅಧ್ಯಕ್ಷರು.—ಹೊಣೆಗಾರಿಕೆ ಪ್ರಶ್ನೆ ಇದರಲ್ಲಿ ಬರುವುದಿಲ್ಲ.

ಶ್ರೀ ಎಸ್. ಶರಣಗೌಡ.—ಸರ್ವಿಸ್ ರಿಜಿಸ್ಟರ್ ಯಾರಿಂದ ಬಂದಿಲ್ಲ ?

Sri MOHAMED ALI.—Service Register has been called for from the District Excise Officer.

ಶ್ರೀ ಎಸ್. ಶರಣಗೌಡ.—ಡಿಸ್ಟ್ರಿಕ್ಟ್ ಎಕ್ಸೈಸ್ ಆಫೀಸರು ಅಲ್ಲದ್ದಾರೆ ಅಲ್ಲವೆ ?

Sri MOHAMED ALI.—We have not received because they have not sent it.

ಶ್ರೀ ಎಸ್. ಶರಣಗೌಡ.—ಸರ್ವಿಸ್ ರಿಜಿಸ್ಟರ್ ಕಳುಹಿಸಬೇಕು ಎಂದು ಹೇಳಿದ ತಾರೀಖು ಯಾವುದು ?

Sri MOHAMED ALI.—A reminder has been sent.

Sri S. SHARAN GOWDA.—I want to know the date.

Sri MOHAMED ALI.—I have not got that detail with me.

ಶ್ರೀ ಎಸ್. ಶರಣಗೌಡ.—1ನೆಯ ನವೆಂಬರ್ 1956 ನಂತರ ಕಳುಹಿಸಿದ್ದೀರೋ ಅಥವ ಇತ್ತೀಚೆಗೆ ಕಳುಹಿಸಿದ್ದೀರೋ ?

Sri MOHAMED ALI.—Sir, it is quite clear that papers were called for after the Reorganisation of the State.

ಶ್ರೀ ಎಸ್. ಶರಣಗೌಡ.—ರಿಮೈಂಡರ್ ಕಳುಹಿಸಿದ ತಾರೀಖು ಯಾವುದು ?

Mr. SPEAKER.—Have you got the date of the reminder ? He wants it.

Sri MOHAMED ALI.—That detail is not with me.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇನ್ನೂ ಯಾವುದು ಪ್ರಕರಣದಲ್ಲಿ ವಿಧಾನಬಾಗಿರುವುದಕ್ಕೆ ಕಾರಣ ಸಂಬಂಧಪಟ್ಟ ಅಧಿಕಾರಿಯ ಕಾಗದಪತ್ರ ಆಂಧ್ರಪ್ರದೇಶದ ರೆವಿನ್ಯೂ ಬೋರ್ಡಿನಲ್ಲಿದೆಯೆಂದು ಹೇಳಿದೆ. ಆಂಧ್ರಪ್ರದೇಶದ ರೆವಿನ್ಯೂ ಬೋರ್ಡಿಗೆ ಈ ಕಾಗದಪತ್ರಗಳು ಹೋಗುವುದಕ್ಕೆ ಕಾರಣವೇನು ?

ಅಧ್ಯಕ್ಷರು.—(*a*) ಪ್ರಶ್ನೆಗೆ ಉತ್ತರ ನೋಡಿ. Increments, Leave ವಿಚಾರಗಳಲ್ಲಿ ಯಾವುದೂ pending ನಲ್ಲಿಲ್ಲವೆಂದು ಹೇಳಿದ್ದಾರೆ.

Sri C. J. MUCKANNAPPA.—May I know why the documents concerning the official went before the Revenue Board? Was there any appeal by the official concerned?

Sri MOHAMED ALI.—Before the reorganisation of the State the official had filed an appeal to the Board of Revenue, Hyderabad.

Sri C. J. MUCKANNAPPA.—The Hon'ble Minister was pleased to say that they have not received the file. Will the Minister assure that he will call for the file immediately and dispose of the case?

Sri MOHAMED ALI.—We have recently issued a reminder and if there is any further delay necessary action will be taken against the concerned official.

Sri G. ANNA RAO.—May I know whether any officer was deputed to bring the records?

Sri MOHAMED ALI.—Wherever it was necessary, this measure was taken.

ಅಧ್ಯಕ್ಷರು.—ಮತ್ತೆ ಹೇಳಿದ್ದಾರೆ, reminder ಕಳುಹಿಸಿದ್ದೇನೆ ಎಂದು.

ಶ್ರೀ ಎ. ಭೀವ ಪ್ಪನಾಯಕ್..—ಅವರು ಕಳುಹಿಸಿಲ್ಲ; ಫೈಲು ಬಂದಿಲ್ಲ ಎಂದು ಹೇಳಿ ಹೀಗೆಯೇ ಮುಂದುವರಿದರೆ ನೌಕರರ ಗತಿಯೇನು? Will the Hon'ble Minister see that it is received immediately.

(No reply)

Steps taken for the Removal of Untouchability in the State.

Q.—2531. Sri MANJAPPA ULLAL (Karkal).—

Will the Government be pleased to state :—

(*a*) the steps taken for the removal of untouchability in the State;

(*b*) the steps taken in this behalf especially in villages?

A.—Sri R. CHENNIGARAMAIAH (Minister for Local Self-Government).—

(*a*) Under Article 17 of the Constitution, untouchability is abolished and its practice in any form is forbidden. The Parliament has also passed the Untouchability (Offences) Act, 1955, prescribing severe punishments for this offence.

Government is taking all possible steps to promote the educational and economic interests of the Scheduled Castes, Scheduled Tribes, Ex-Criminal Tribes and Nomadic Tribes in this State. Various schemes relating to the following items are sanctioned by Government :—

1. Grant of Scholarships to the scheduled Castes students.
2. Hostel facilities.
3. Starting of Agricultural Colonies.
4. Construction of houses.
5. Drinking Water Wells.
6. Legal Aid.
7. Economic aid to development of crafts.

These schemes aim at improving the social and economic conditions and thereby removing the stigma of untouchability.

(*b*) All the Deputy Commissioners and the Inspector General of Police have been instructed to enforce the provisions of the Untouchability (Offences) Act, 1955 and to implement them. Government also propose to assist such of the caste Hindus who wish to build houses in new Harijan colonies to the extent of ten per cent of the houses to be newly built.

ಶ್ರೀ ಮಂಜಪ್ಪ ಉಳ್ಳಾಳ್.—ಅಸ್ಪೃಶ್ಯತಾ ನಿವಾರಣಾ ಕಾನೂನು ಜಾರಿಯಲ್ಲಿದೆಯೆಂದು ಪೋಲೀಸಿನವರಿಗೆ ಗೊತ್ತಿದೆಯೇ?

ಶ್ರೀ ಆರ್. ಚೆನ್ನಿಗರಾಮಯ್ಯ.—ಗೊತ್ತಿದೆ.

ಶ್ರೀ ಮಂಜಪ್ಪ ಉಳ್ಳಾಳ್.—ಗೊತ್ತಿದ್ದ ಮೇಲೂ, ಅಸ್ಪೃಶ್ಯತಾ ನಿವಾರಣಾ ಕಾನೂನಿನ ಪ್ರಕಾರ ಕಾರ್ಯಕ್ರಮ ತೆಗೆದು ಕೊಳ್ಳದೆ ಇದ್ದರೆ ಪೋಲೀಸಿನವರ ಮೇಲೆ ಕಾರ್ಯಕ್ರಮ ತೆಗೆದು ಕೊಳ್ಳುವವರು ಯಾರು?

ಶ್ರೀ ಆರ್. ಚೆನ್ನಿಗರಾಮಯ್ಯ.—ಪೋಲೀಸಿನವರ ಗಮನಕ್ಕೆ ತಂದರೂ ಅವರು ಕೇಸು ಹಾಕದೆ ಇದ್ದರೆ ಅವರ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಮಂಜಪ್ಪ ಉಳ್ಳಾಳ್.—ಅಂಥ ಸಂದರ್ಭದಲ್ಲಿ Legal Aid ಕೊಡುತ್ತೇವೆಂದು ಹೇಳಿದ್ದೀರಿ. Legal Aid ನ್ನು ಯಾವ ರೂಪದಲ್ಲಿ ಕೊಡುತ್ತೀರಿ?

ಶ್ರೀ ಆರ್. ಚೆನ್ನಿಗರಾಮಯ್ಯ.—ಅಸ್ಪೃಶ್ಯತಾ ವಿಚಾರದಲ್ಲಿ ಯಾರಾದರೂ ಕಾನೂನಿಗೆ ವಿರುದ್ಧವಾಗಿ ನಡೆದುಕೊಂಡು ಅಂಥವರ ಮೇಲೆ ಕೇಸು ಹಾಕಿದರೆ, ಆ ಸಂದರ್ಭದಲ್ಲಿ ಪಾರ್ಟಿಯ ಪರವಾಗಿ ಕೋರ್ಟಿನಲ್ಲಿ ವಾದ ನಡೆಸಲು ಲಾಯರಿಗಾಗಿ ಹಣ ಸಹಾಯ ಸಹ ಕೊಡುತ್ತೇವೆ.

Sri F. H. MOHSIN.—May I know how many offences have been registered under the Untouchability Removal Act, since the date of reorganisation?